

ತುರಿಸಿಕೊಳ್ಳುತ್ತ ನಿಧಾನಕ್ಕೆ ಹುಚ್ಚನಂತೆ ಕಿಟಕಿ ಕಡೆ ನಡೆದ. ಹೊರಗೆ ಜನ, ವಾಹನಗಳ ದಟ್ಟಣೆ, ಸದ್ದು. ಕುದಿಯುತ್ತ ಈಗ ತನ್ನ ಪಾತ್ರವೇನೆಂದು ಕೇಳಿಕೊಂಡ– ನಾಲ್ಕು ಬಾರಿಸಲೆ? ನೆಲಕ್ಕೆ ಹಾಕಿ ಸಿಕ್ಕಸಿಕ್ಕಲ್ಲಿ ಒದ್ದು ಗರ್ಭಪಾತ ಮಾಡಿಸಲೆ? ಕಿಟಕಿ ತೆಗೆದು ಎತ್ತಿ ಹೊರಗೆ ಬಿಸಾಕಲೆ? ಸಿಗರೇಟಿನ ತೊಟ್ಟು ಬೆರಳು ಸುಟ್ಟು ಇತ್ತ ತಿರುಗಿ ಬೂದಿ ಕರಂಡಕದತ್ತ ಬರುವವರೆಗೂ ಸಯೀದಳಿಗೆ ಅವಕಾಶವೇ ಇರಲಿಲ್ಲ. ಆಕೆ ಮನಸ್ಸು ಗಟ್ಟಿಮಾಡಿಕೊಂಡು ಮಾತಾಡಿದಳು.

"ಬಸಿರೆ? ಬೇರೆ ಕೆಲಸವಿಲ್ಲ. ನಿಜ ಅಂದ್ರೆ... ಈಗೀಗ ನನ್ನ ದನಿ ತುಂಬ ಮಧುರವಾಗಿದೆ."

ಹಮೀದ ಒಂದೆರಡು ಕ್ಷಣ ನೆಟ್ಟನೋಟವನ್ನು ಕದಲಿಸಲಿಲ್ಲ. ಅನಂತರ ಅತ್ಯಂತ ಯಾತನೆ ನೀಡುವ ಹಾಸ್ಯ ಪ್ರಸಂಗವೊಂದನ್ನು ಕೇಳಿದವನಂತೆ ಹುಚ್ಚೆದ್ದು ನಗತೊಡಗಿದ. ಆತನ ಮುಖಕ್ಕೆ ರಕ್ತ ಚಿಮ್ಮಿಬಂದು ಇನ್ನೇನು ಒಡೆದುಹೋಗಲಿರುವ ಕೆಂಪು ಬಲೂನಿನಂತೆ ಉಬ್ಬತೊಡಗಿತು. ಆತನ ಹೆಂಡತಿಯ ಕುಪಿತ ದನಿ ಕೇಳಿದ್ದೆ ಆತನ ಮುಖದ ನರಗಳು ಎಲ್ಲ ಭಾವನೆಗಳನ್ನೂ ಕಳೆದುಕೊಂಡು ಸುಮ್ಮನಾದವು.

"ಮೊದಲು ಹೇಳೋದು ಕೇಳಿ!" ಆತ ಸುಮ್ಮನೆ ಕೂತ. ಅನಂತರ ಏನಾಯಿತೆಂದು ಆಕೆ ಆತನಿಗೆ ಹೇಳತೊಡಗಿದಳು. ಹಮೀದ ಎಂದಿನಂತೆ ಬೆಳಗ್ಗೆ ಕಚೇರಿಗೆ ಹೋದಮೇಲೆ, ಮಕ್ಕಳೆಲ್ಲ ಶಾಲೆಗೆ ಹೋದಮೇಲೆ ಎಂದಿನಂತೆ ಸಯೀದ ಏಕಾಂಗಿ. ನೆಲ ಸಾರಿಸುವುದು, ಬಟ್ಟೆ ಹಣೆಯುವುದು, ಖೋಲಿಯನ್ನು ಓರಣವಾಗಿಡುವುದು, ಅಡುಗೆ –